# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | **312** |
| ಮಾನ್ಯ ಸದಸ್ಯರ ಹೆಸರು | ಶ್ರೀ ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | 19.07.2024 |
| ಉತ್ತರಿಸುವ ಸಚಿವರು | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಬಾಲಕ/ಬಾಲಕಿಯರ (ಪ್ರೀ ಮತ್ತು ಪೋಸ್ಟ್ ಮೆಟ್ರಿಕ್)ಎಷ್ಟು ವಸತಿ ನಿಲಯಗಳಿವೆ: (ಜಿಲ್ಲಾವಾರು ವಿವರ ನೀಡುವುದು.) | ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ 1277 ಮೆಟ್ರಿಕ್-ಪೂರ್ವ ಹಾಗೂ 1169 ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳು ಹೀಗೆ ಒಟ್ಟು 2446 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಈ ವಿದ್ಯಾರ್ಥಿ ನಿಲಯಗಳಲ್ಲಿ 228761 ವಿದ್ಯಾರ್ಥಿಗಳಿಗೆ ಪ್ರವೇಶವಕಾಶವನ್ನು ಕಲ್ಪಿಸಲಾಗಿರುತ್ತದೆ. ಜಿಲ್ಲಾವಾರು ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಿದೆ. |
| ಆ) | ಹಿಂದುಳಿದ ವರ್ಗಗಳ ವಸತಿ ನಿಲಯಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿದ್ದು, ಅವುಗಳನ್ನು ನಿವಾರಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ. | ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್-ಪೂರ್ವ ವಿದ್ಯಾರ್ಥಿನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ ಸೌಕರ್ಯದ ಜೊತೆಗೆ ಶೈಕ್ಷಣಿಕವಾಗಿ ಪೂರಕವಾಗಿ ಅಗತ್ಯ ಸೌಲಭ್ಯಗಳಾದ ಸಮವಸ್ತ್ರ(ನೈಟ್ ಡ್ರೆಸ್ ಮತ್ತು ಟ್ರ್ಯಾಕ್ ಸೂಟ್) ಅಲ್ಪಕಾಲಿಕ ಭೋದಕರ ವ್ಯವಸ್ಥೆ, ಪಠ್ಯ-ಪುಸ್ತಕ, ಲೇಖನ ಸಾಮಗ್ರಿಗಳು, ಜಮಖಾನ-ಹೊದಿಕೆ, ವೈದ್ಯಕೀಯ ಸೌಲಭ್ಯ, ದಿನಪತ್ರಿಕೆ, ಶುಚಿ-ಸಂಭ್ರಮ ಕಿಟ್ ಹಾಗೂ ಕ್ರೀಡಾ ಸಾಮಗ್ರಿಗಳನ್ನು ಒದಗಿಸಲಾಗುತ್ತಿದೆ.<br><br>ಅದರಂತೆ, ಮೆಟ್ರಿಕ್-ನಂತರದ ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ ಸೌಕರ್ಯದ ಜೊತೆಗೆ ಜಮಖಾನ-ಹೊದಿಕೆ, ಶುಚಿ-ಸಂಭ್ರಮ ಕಿಟ್, ದಿನಪತ್ರಿಕೆ- ಮ್ಯಾಗಜಿನ್, ನೈಟ್ ಡ್ರಸ್ ಮತ್ತು ಟ್ರ್ಯಾಕ್ ಸೂಟ್, ಕ್ರೀಡಾ ಸಾಮಗ್ರಿ, ವೈದ್ಯಕೀಯ ಸೌಲಭ್ಯದ ಜೊತೆಗೆ ಶೈಕ್ಷಣಿಕ ಪೂರಕವಾಗಿ ನಿಲಯಗಳಲ್ಲಿ ವ್ಯಕ್ತಿತ್ವ ವಿಕಸನ, ವೃತ್ತಿ ಬುನಾದಿ ತರಬೇತಿ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಿಳುವಳಿಕೆ/ ಮಾರ್ಗದರ್ಶನ ನೀಡುವ ಸಲುವಾಗಿ ಕಾರ್ಯಾಗಾರವನ್ನು ಆಯೋಜಿಸಲಾಗುತ್ತಿದೆ. |

| | | |
|---|---|---|
| | | ಇಲಾಖಾ ವಿದ್ಯಾರ್ಥಿನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಅಭಿವೃದ್ಧಿಗಾಗಿ ನಿಲಯಗಳಲ್ಲಿ ಮೂಲಭೂತ ಸೌಕರ್ಯಗಳಾದ ಕಂಪ್ಯೂಟರ್, ಯು.ಪಿ.ಎಸ್, ಸೋಲಾರ್ ವಾಟರ್ ಹೀಟರ್, ವಾಟರ್ ಪ್ಯೂರಿಫೈಯರ್, ಟೂ-ಟಯರ್ ಕಾಟ್, ಹಾಸಿಗೆ, ತಟ್ಟೆ-ಲೋಟ, ಡೈನಿಂಗ್ ಟೇಬಲ್, ಚಪಾತಿ ತಯಾರಿಸುವ ಯಂತ್ರ / ಜೋಳದ ರೊಟ್ಟಿ ತಯಾರಿಸುವ ಯಂತ್ರ, ಸಿ.ಸಿ.ಕ್ಯಾಮೆರಾ, ಚಪ್ಪಲಿ ಸ್ಟ್ಯಾಂಡ್, ಗ್ರಂಥಾಲಯ ವ್ಯವಸ್ಥೆ, ಕ್ರೀಡಾ ಸಾಮಗ್ರಿ, ನ್ಯಾಪ್ ಕಿನ್ ಬರ್ನಿಂಗ್ ಮೆಷಿನ್‌ಗಳನ್ನು ಕಲ್ಪಿಸಲಾಗಿದೆ.<br>ಆದಾಗ್ಯೂ, ವಿದ್ಯಾರ್ಥಿನಿಲಯಗಳಲ್ಲಿನ ಮಂಜೂರಾತಿಯ ಸಂಖ್ಯೆಯ ಬೇಡಿಕೆಗೆ ಅನುಗುಣವಾಗಿ ಹೆಚ್ಚಿನ ಅಗತ್ಯವಿರುವ ಮೂಲಭೂತ ಸೌಲಭ್ಯಗಳನ್ನು ಆಯಾ ಆರ್ಥಿಕ ವರ್ಷದ ಆಯವ್ಯಯದಲ್ಲಿ ಒದಗಿಸಲಾಗುವ ಅನುದಾನದ ಲಭ್ಯತೆಯನುಸಾರ ಕಲ್ಪಿಸಲಾಗುತ್ತಿದೆ.<br><br>ಮುಂದುವರೆದು 2024-25ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ 178(2) ರಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ 100 ಸಂಖ್ಯಾಬಲದ 150 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಹಾಗೂ 174 ಮುರಾರ್ಜಿ ದೇಸಾಯಿ ವಸತಿ ಶಾಲೆ/ಕಾಲೇಜುಗಳಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ರೂ.200.00 ಕೋಟಿಗಳ ವೆಚ್ಚದಲ್ಲಿ ಹಂತ ಹಂತವಾಗಿ ಒದಗಿಸಲಾಗುವುದು ಎಂದು ಘೋಷಿಸಿದ್ದು. ಪ್ರಸಕ್ತ ಸಾಲಿನಲ್ಲಿ ಇಲಾಖೆಯ ವಿದ್ಯಾರ್ಥಿನಿಲಯಗಳಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ರೂ.20.00ಕೋಟಿಗಳ ಅನುದಾನ ನಿಗಧಿಪಡಿಸಲಾಗಿದ್ದು, ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 389 ಬಿಎಂಎಸ್ 2024, ದಿನಾಂಕ: 15.06.2024 ರಂತೆ ರೂ.20.00 ಕೋಟಿಗಳಲ್ಲಿ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ವಿದ್ಯಾರ್ಥಿನಿಲಯವಾರು ಬೇಡಿಕೆಯನ್ನು ಪಡೆದು ಪೂರೈಕೆ ಮಾಡಲು ಕ್ರಮವಹಿಸಲಾಗುತ್ತಿದೆ. |

| | | |
|---|---|---|
| ಇ) | ತೀರ ಬಡವರ ಮಕ್ಕಳು ಓದುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳಲ್ಲಿ ಗುಣಮಟ್ಟವಿಲ್ಲದ ದಿನಸಿ ಬಳಕೆ, ತಾಜಾ ಅಲ್ಲದ ತರಕಾರಿ, ಅರೆ ಬೆಂದ ಮತ್ತು ಕೀಟಗಳು ಇರುವ ಕಳಪೆ ಆಹಾರ ಕೊಡುತ್ತಿರುವುದಕ್ಕೆ ಸರ್ಕಾರ ಏನು ಕ್ರಮಗಳನ್ನು ಕೈಗೊಂಡಿದೆ. | ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿನ ನಿಲಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಭೋಜನಾ ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ. ಇಲಾಖೆಯ ವಿದ್ಯಾರ್ಥಿನಿಲಯಗಳಿಗೆ ಸರಬರಾಜು ಮಾಡಲಾಗುತ್ತಿರುವ ಆಹಾರ ಪದಾರ್ಥಗಳ ಗುಣಮಟ್ಟವನ್ನು ಉತ್ತಮಪಡಿಸಲು, ಸಕಾಲದಲ್ಲಿ ತಾಜಾ ತರಕಾರಿ ಮತ್ತು ಗುಣಮಟ್ಟದ ಆಹಾರ ಪದಾರ್ಥಗಳನ್ನು ವಿದ್ಯಾರ್ಥಿನಿಲಯಗಳ ಬಾಗಿಲಿಗೆ ಸರಬರಾಜು ಮಾಡಲು ಹಾಗೂ ಟೆಂಡರ್ ಪ್ರಕ್ರಿಯೆಯನ್ನು ಸರಳೀಕರಣಗೊಳಿಸಲು ಈ ಹಿಂದೆ ಇದ್ದ ತಾಲ್ಲೂಕುವಾರು ಟೆಂಡರ್ ಆಹ್ವಾನಿಸುವ ಬದಲು ಜಿಲ್ಲೆಗೆ ಎರಡು ವರ್ಷಗಳ ಅವಧಿಗೆ ಒಂದೇ ಟೆಂಡರ್ ಆಹ್ವಾನಿಸಲು ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲೂ 499 ಬಿಎಂಎಸ್ 2023, ದಿನಾಂಕ: 22.01.2024 ರಲ್ಲಿ ಆದೇಶಿಸಲಾಗಿರುತ್ತದೆ. ಈ ಸಂಬಂಧ ಸರ್ಕಾರದ ಪತ್ರ ಸಂಖ್ಯೆ: ಬಿಸಿಡಬ್ಲೂ 499 ಬಿಎಂಎಸ್ 2023, ದಿನಾಂಕ:01.07.2024 ರಲ್ಲಿ ಪರಿಷ್ಕೃತ ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ.<br><br>ಸದರಿ ಮಾರ್ಗಸೂಚಿಗಳಲ್ಲಿ ಸರಬರಾಜುದಾರರು ಆಹಾರ ಸಾಮಗ್ರಿಗಳನ್ನು ವಿದ್ಯಾರ್ಥಿನಿಲಯಗಳ ಬಾಗಿಲಿಗೆ ಸರಬರಾಜು ಮಾಡುವುದನ್ನು ಖಚಿತಪಡಿಸಿಕೊಳ್ಳಲು ಸರಬರಾಜು ಮಾಡುವ ವಾಹನಗಳಿಗೆ ಕಡ್ಡಾಯವಾಗಿ ಜಿ.ಪಿ.ಎಸ್ ಸಾಧನವನ್ನು ಅಳವಡಿಸಲು ಸೂಚಿಸಲಾಗಿರುತ್ತದೆ. ವಿದ್ಯಾರ್ಥಿನಿಲಯಗಳಿಗೆ ಸರಬರಾಜು ಮಾಡುವ ಆಹಾರ ಪದಾರ್ಥಗಳ ಗುಣಮಟ್ಟ ಪರಿಶೀಲನೆ ಮತ್ತು ಉತ್ತಮ ಆಹಾರ ಸಾಮಗ್ರಿಗಳನ್ನು ವಿದ್ಯಾರ್ಥಿನಿಲಯದ ಬಾಗಿಲಿಗೆ ಸರಬರಾಜು ಮಾಡುವುದನ್ನು ಪರಿಶೀಲಿಸಲು ಹಾಗೂ ಮೇಲುಸ್ತುವಾರಿ ನಡೆಸಲು ಆಯಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಆಹಾರ ಗುಣಮಟ್ಟ ಪರಿಶೀಲನಾ ಮತ್ತು ಮೇಲುಸ್ತುವಾರಿ ಸಮಿತಿಯನ್ನು ರಚಿಸಲಾಗಿದ್ದು, ವಿದ್ಯಾರ್ಥಿಗಳಿಗೆ ಸರಬರಾಜು ಆಗುತ್ತಿರುವ ಆಹಾರ ಪದಾರ್ಥಗಳಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಆಯಾ ಜಿಲ್ಲೆಯಲ್ಲಿನ ಯಾವುದಾದರೂ 10 ವಿದ್ಯಾರ್ಥಿನಿಲಯಗಳ ಆಹಾರ ಪದಾರ್ಥಗಳನ್ನು ಯಾದೃಚ್ಛಿಕವಾಗಿ ಆಯ್ಕೆ ಮಾಡಿಕೊಂಡು ಲ್ಯಾಬ್‌ಟೆಸ್ಟ್‌ಗೆ ಸಲ್ಲಿಸಿ ಗುಣಮಟ್ಟವನ್ನು ಪರಿಶೀಲಿಸಲಾಗುವುದು. |

| | | |
|---|---|---|
| | | ಅಲ್ಲದೇ, ಕೇಂದ್ರ ಸರ್ಕಾರದಿಂದ ವಿದ್ಯಾರ್ಥಿನಿಲಯಗಳಿಗೆ ಸರಬರಾಜಾಗುತ್ತಿದ್ದ ಅಕ್ಕಿ ಮತ್ತು ಗೋಧಿಯ ಎತ್ತುವಳಿಗೆ ಸಂಬಂಧಿಸಿದಂತೆ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯಿಂದ ಪರಿಷ್ಕೃತ ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಅದರಂತೆ, ಕೇಂದ್ರ ಸರ್ಕಾರದಿಂದ ಹಂಚಿಕೆ ಮಾಡಲಾಗುವ ಆಹಾರ ಧಾನ್ಯಗಳನ್ನು ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಗೋದಾಮುಗಳಿಂದ ಈ ಹಿಂದೆ 6 ತಿಂಗಳಿಗೊಮ್ಮೆ ಎತ್ತುವಳಿ ಮಾಡುತ್ತಿದ್ದನ್ನು ಮಾರ್ಪಾಡುಗೊಳಿಸಿ ಪ್ರತಿ ತಿಂಗಳು ಒಂದು ಬಾರಿ ಎತ್ತುವಳಿ ಮಾಡಲು ಹಾಗೂ ಲಭ್ಯವಿರುವ ಅಕ್ಕಿ ಮತ್ತು ಗೋಧಿಯ ಸಂಗ್ರಹಣೆಯನ್ನು ಪರಿಶೀಲಿಸಿ, ಉತ್ತಮ ಗುಣಮಟ್ಟದ ಆಹಾರ ಧಾನ್ಯವನ್ನು ಆಯ್ಕೆ ಮಾಡಿಕೊಳ್ಳಲು ನಿಲಯದ ನಿಲಯ ಮೇಲ್ವಿಚಾರಕರಿಗೆ / ನಿಲಯ ಪಾಲಕರಿಗೆ ಅವಕಾಶವನ್ನು ಕಲ್ಪಿಸಲಾಗಿರುತ್ತದೆ.<br><br>ಮುಂದುವರೆದು ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿ ನಿಗಧಿಪಡಿಸಿರುವ ಮಾಸಿಕ ಆಹಾರ ವೆಚ್ಚದಂತೆ ವಲಯವಾರು ನಿಗಧಿಪಡಿಸಲಾಗಿರುವ ಡಯಟ್ ಚಾರ್ಟ್ ಅನುಸಾರ ಉತ್ತಮ ಗುಣಮಟ್ಟದ ಆಹಾರ ಒದಗಿಸಲಾಗುತ್ತಿದೆ. |
| ಈ) | ಇತ್ತೀಚೆಗೆ ಕೆಲವು ಮುಖ್ಯ ನಗರಗಳಿಗೆ ಬಡ ಹಿಂದುಳಿದ ವಿದ್ಯಾರ್ಥಿಗಳು ಪಿಯುಸಿ/ ಉನ್ನತ ಶಿಕ್ಷಣ ಪಡೆಯಲು ಬರುತ್ತಿರುವುದರಿಂದ ವಸತಿ ನಿಲಯಗಳ ಬೇಡಿಕೆ ಹೆಚ್ಚಾಗಿದ್ದು ಅದನ್ನು ಹೇಗೆ ಸರಿದೂಗಿಸಲಾಗಿದೆ? | ಪ್ರಮುಖ ಶೈಕ್ಷಣಿಕ ಕೇಂದ್ರಗಳು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಹೆಚ್ಚಿನ ಬೇಡಿಕೆಯಿರುವ ಹಿನ್ನೆಲೆಯಲ್ಲಿ, 2024-25ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ-178(1) ರನ್ವಯ 100 ಸಂಖ್ಯಾಬಲದ ಮೆಟ್ರಿಕ್ ನಂತರದ 75 ಬಾಲಕರ ಮತ್ತು 75 ಬಾಲಕಿಯರ ವಸತಿ ನಿಲಯಗಳನ್ನು ಜಿಲ್ಲಾ ಕೇಂದ್ರಗಳಲ್ಲಿ ಪ್ರಾರಂಭಿಸಲು ಘೋಷಿಸಲಾಗಿದ್ದು, ಅದರಂತೆ ವಿವಿಧ ಜಿಲ್ಲೆಗಳ ಜಿಲ್ಲಾ ಕೇಂದ್ರಗಳಲ್ಲಿ ಬೇಡಿಕೆಯನುಸಾರ 100 ಸಂಖ್ಯಾಬಲದ 150 ಮೆಟ್ರಿಕ್ ನಂತರದ ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಿ ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 390 ಬಿಎಂಎಸ್ 2024, ದಿನಾಂಕ: 18.06.2024 ರಲ್ಲಿ ಆದೇಶಿಸಲಾಗಿರುತ್ತದೆ. |

| | | |
|---|---|---|
| | | ಪ್ರಸಕ್ತ ಸಾಲಿನಿಂದ ಸದರಿ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಲು ಕ್ರಮವಹಿಸಲಾಗಿದೆ.ಜಿಲ್ಲಾವಾರು ಮಂಜೂರು ಮಾಡಲಾಗಿರುವ ವಿದ್ಯಾರ್ಥಿ ನಿಲಯಗಳ ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಿದೆ. |

**ಸಂಖ್ಯೆ: ಹಿಂವಕ 435 ಬಿಎಂಎಸ್ 2024**

**(ಶಿವರಾಜ್ ಎಸ್ ತಂಗಡಗಿ )**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಮಾನ್ಯ ವಿಧಾನಪರಿಷ್ ಸದಸ್ಯರಾದ ಶ್ರೀ [illegible] ([illegible] ಹೊಂದಿದವರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂ.312ಕ್ಕೆ

## ಅನುಬಂಧ-1

## ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ಜಿಲ್ಲಾವಾರು ವಿವರ:

| ಕ್ರ. ಸಂ | ಜಿಲ್ಲೆಯ ಹೆಸರು | ಬಾಲಕರ | | ಬಾಲಕಿಯರ | | ಒಟ್ಟು | |
|---|---|---|---|---|---|---|---|
| | | ವಿದ್ಯಾರ್ಥಿ ನಿಲಯಗಳ ಸಂಖ್ಯೆ | ಮಂಜೂರಾತಿ ಸಂಖ್ಯೆ | ವಿದ್ಯಾರ್ಥಿ ನಿಲಯಗಳ ಸಂಖ್ಯೆ | ಮಂಜೂರಾತಿ ಸಂಖ್ಯೆ | ವಿದ್ಯಾರ್ಥಿ ನಿಲಯಗಳ ಸಂಖ್ಯೆ | ಮಂಜೂರಾತಿ ಸಂಖ್ಯೆ |
| 1 | BAGALKOTE | 36 | 2445 | 7 | 395 | 43 | 2840 |
| 2 | BALLARY | 17 | 1055 | 5 | 260 | 22 | 1315 |
| 3 | BELAGAVI | 88 | 4650 | 12 | 600 | 100 | 5250 |
| 4 | BENGALURU (R) | 13 | 585 | 3 | 115 | 16 | 700 |
| 5 | BENGALURU (U) | 2 | 95 | 1 | 20 | 3 | 115 |
| 6 | BIDAR | 38 | 2102 | 8 | 415 | 46 | 2517 |
| 7 | CHAMARAJANAGAR | 10 | 435 | 2 | 95 | 12 | 530 |
| 8 | CHIKKABALLAPUR | 26 | 1375 | 5 | 250 | 31 | 1625 |
| 9 | CHIKKAMAGALURU | 39 | 1795 | 19 | 1250 | 58 | 3045 |
| 10 | CHITRADURGA | 36 | 1860 | 8 | 470 | 44 | 2330 |
| 11 | DAKSHINA KANNADA | 13 | 560 | 10 | 540 | 23 | 1100 |
| 12 | DAVANAGERE | 24 | 1210 | 11 | 665 | 35 | 1875 |
| 13 | DHARWAD | 18 | 905 | 7 | 290 | 25 | 1195 |
| 14 | GADAG | 25 | 1405 | 8 | 460 | 33 | 1865 |
| 15 | HASSAN | 52 | 2615 | 12 | 675 | 64 | 3290 |
| 16 | HAVERI | 37 | 1945 | 9 | 500 | 46 | 2445 |
| 17 | KALABURGI | 59 | 3220 | 14 | 710 | 73 | 3930 |
| 18 | KODAGU | 14 | 510 | 5 | 245 | 19 | 755 |
| 19 | KOLAR | 19 | 1046 | 7 | 300 | 26 | 1346 |
| 20 | KOPPALA | 34 | 2175 | 8 | 495 | 42 | 2670 |
| 21 | MANDYA | 48 | 2645 | 16 | 780 | 64 | 3425 |
| 22 | MYSURU | 37 | 1615 | 6 | 265 | 43 | 1880 |
| 23 | RAICHUR | 31 | 1770 | 6 | 320 | 37 | 2090 |
| 24 | RAMANAGAR | 20 | 868 | 5 | 190 | 25 | 1058 |
| 25 | SHIVAMOGGA | 38 | 1970 | 19 | 1121 | 57 | 3091 |
| 26 | TUMAKURU | 49 | 2540 | 11 | 650 | 60 | 3190 |
| 27 | UDUPI | 12 | 675 | 6 | 315 | 18 | 990 |
| 28 | UTTARA KANNADA | 46 | 2411 | 22 | 1415 | 68 | 3826 |
| 29 | VIJAYANAGARA | 26 | 1855 | 10 | 660 | 36 | 2515 |
| 30 | VIJAYAPURA | 52 | 2985 | 12 | 625 | 64 | 3610 |
| 31 | YADGIRI | 34 | 1875 | 10 | 515 | 44 | 2390 |
| | ಒಟ್ಟು | **993** | **53197** | **284** | **15606** | **1277** | **68803** |

## ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಜಿಲ್ಲಾವಾರು ವಿವರ:

| ಕ್ರ. ಸಂ | ಜಿಲ್ಲೆಯ ಹೆಸರು | ಬಾಲಕರ | | ಬಾಲಕಿಯರ | | ಒಟ್ಟು | |
|---|---|---|---|---|---|---|---|
| | | ವಿದ್ಯಾರ್ಥಿ ನಿಲಯಗಳ ಸಂಖ್ಯೆ | ಮಂಜೂರಾತಿ ಸಂಖ್ಯೆ | ವಿದ್ಯಾರ್ಥಿ ನಿಲಯಗಳ ಸಂಖ್ಯೆ | ಮಂಜೂರಾತಿ ಸಂಖ್ಯೆ | ವಿದ್ಯಾರ್ಥಿ ನಿಲಯಗಳ ಸಂಖ್ಯೆ | ಮಂಜೂರಾತಿ ಸಂಖ್ಯೆ |
| 1 | BAGALKOTE | 18 | 2619 | 21 | 3169 | 39 | 5788 |
| 2 | BALLARY | 19 | 2711 | 8 | 1150 | 27 | 3861 |
| 3 | BELAGAVI | 28 | 4119 | 31 | 4526 | 59 | 8645 |
| 4 | BENGALURU (R) | 8 | 925 | 7 | 794 | 15 | 1719 |
| 5 | BENGALURU (U) | 23 | 3189 | 25 | 3443 | 48 | 6632 |
| 6 | BIDAR | 18 | 2619 | 13 | 1731 | 31 | 4350 |
| 7 | CHAMARAJANAGAR | 7 | 834 | 12 | 1394 | 19 | 2228 |
| 8 | CHIKKABALLAPUR | 13 | 1739 | 14 | 1999 | 27 | 3738 |
| 9 | CHIKKAMAGALURU | 13 | 1794 | 29 | 4012 | 42 | 5806 |
| 10 | CHITRADURGA | 28 | 3682 | 29 | 3762 | 57 | 7444 |
| 11 | DAKSHINA KANNADA | 20 | 2544 | 34 | 4482 | 54 | 7026 |
| 12 | DAVANAGERE | 22 | 3082 | 24 | 3300 | 46 | 6382 |
| 13 | DHARWAD | 19 | 2720 | 23 | 3105 | 42 | 5825 |
| 14 | GADAG | 12 | 1735 | 17 | 2375 | 29 | 4110 |
| 15 | HASSAN | 26 | 3674 | 26 | 3657 | 52 | 7331 |
| 16 | HAVERI | 10 | 1481 | 19 | 2637 | 29 | 4118 |
| 17 | KALABURGI | 27 | 3569 | 28 | 3625 | 55 | 7194 |
| 18 | KODAGU | 8 | 850 | 11 | 1200 | 19 | 2050 |
| 19 | KOLAR | 17 | 1725 | 16 | 1656 | 33 | 3381 |
| 20 | KOPPALA | 9 | 1551 | 16 | 2373 | 25 | 3924 |
| 21 | MANDYA | 24 | 3254 | 21 | 2832 | 45 | 6086 |
| 22 | MYSURU | 25 | 3794 | 24 | 3416 | 49 | 7210 |
| 23 | RAICHUR | 14 | 2037 | 17 | 2401 | 31 | 4438 |
| 24 | RAMANAGAR | 11 | 1331 | 11 | 1250 | 22 | 2581 |
| 25 | SHIVAMOGGA | 29 | 4043 | 46 | 6587 | 75 | 10630 |
| 26 | TUMAKURU | 23 | 3106 | 30 | 4165 | 53 | 7271 |
| 27 | UDUPI | 9 | 1282 | 16 | 2412 | 25 | 3694 |
| 28 | UTTARA KANNADA | 12 | 1594 | 21 | 2756 | 33 | 4350 |
| 29 | VIJAYANAGARA | 15 | 2264 | 15 | 1931 | 30 | 4195 |
| 30 | VIJAYAPURA | 13 | 1891 | 24 | 3347 | 37 | 5238 |
| 31 | YADGIRI | 9 | 1286 | 12 | 1427 | 21 | 2713 |
| | **ಒಟ್ಟಾರೇ** | **529** | **73044** | **640** | **86914** | **1169** | **159958** |

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು

ಮಾನ್ಯ ವಿಧಾನಪರಿಷತ್ ಸದಸ್ಯರಾದ ಶ್ರೀ ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂ.312ಕ್ಕೆ

ಅನುಬಂಧ-2

**2024-25ನೇ ಸಾಲಿನಲ್ಲಿ ಹೊಸದಾಗಿ ಮಂಜೂರು ಮಾಡಲಾದ 150 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಜಿಲ್ಲಾವಾರು ವಿವರ**

| ಕ್ರ. ಸಂ | ಜಿಲ್ಲೆಯ ಹೆಸರು | ಬಾಲಕರ ವಿದ್ಯಾರ್ಥಿ ನಿಲಯ | ಬಾಲಕಿಯರ ವಿದ್ಯಾರ್ಥಿ ನಿಲಯ | ಒಟ್ಟು |
|---|---|---|---|---|
| 1 | ಬಾಗಲಕೋಟೆ | 4 | 4 | 8 |
| 2 | ಬೆಂಗಳೂರು ಗ್ರಾಮಾಂತರ | 1 | 1 | 2 |
| 3 | ಬೆಂಗಳೂರು ನಗರ | 7 | 7 | 14 |
| 4 | ಬೆಳಗಾವಿ | 4 | 4 | 8 |
| 5 | ಬಳ್ಳಾರಿ | 1 | 2 | 3 |
| 6 | ಬೀದರ್ | 1 | 1 | 2 |
| 7 | ಚಾಮರಾಜನಗರ | 0 | 1 | 1 |
| 8 | ಚಿಕ್ಕಬಳ್ಳಾಪುರ | 1 | 1 | 2 |
| 9 | ಚಿಕ್ಕಮಗಳೂರು | 1 | 1 | 2 |
| 10 | ಚಿತ್ರದುರ್ಗ | 1 | 1 | 2 |
| 11 | ದಕ್ಷಿಣ ಕನ್ನಡ | 2 | 2 | 4 |
| 12 | ದಾವಣಗೆರೆ | 4 | 4 | 8 |
| 13 | ಧಾರವಾಡ | 8 | 7 | 15 |
| 14 | ಗದಗ | 1 | 1 | 2 |
| 15 | ಹಾಸನ | 2 | 2 | 4 |
| 16 | ಹಾವೇರಿ | 2 | 2 | 4 |
| 17 | ಕಲಬುರ್ಗಿ | 4 | 4 | 8 |
| 18 | ಕೊಡಗು | 1 | 1 | 2 |
| 19 | ಕೋಲಾರ | 1 | 1 | 2 |
| 20 | ಕೊಪ್ಪಳ | 5 | 5 | 10 |
| 21 | ಮಂಡ್ಯ | 2 | 2 | 4 |
| 22 | ಮೈಸೂರು | 7 | 7 | 14 |
| 23 | ರಾಯಚೂರು | 2 | 2 | 4 |
| 24 | ರಾಮನಗರ | 2 | 2 | 4 |
| 25 | ಶಿವಮೊಗ್ಗ | 3 | 2 | 5 |
| 26 | ತುಮಕೂರು | 3 | 3 | 6 |
| 27 | ಉಡುಪಿ | 1 | 1 | 2 |
| 28 | ಉತ್ತರ ಕನ್ನಡ | 1 | 1 | 2 |
| 29 | ವಿಜಯಪುರ | 1 | 1 | 2 |
| 30 | ಯಾದಗಿರಿ | 1 | 1 | 2 |
| 31 | ವಿಜಯನಗರ | 1 | 1 | 2 |
| | **ಒಟ್ಟು** | **75** | **75** | **150** |

for ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು